ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

---

ಸಂ:ಕಂ:ವಿವಾದ: 33:2015-16 ದಿ: 27-05-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**
ಸೀತಮ್ಮ ಗಂಡ: ಲೇಟ್ ವೆಂಕಟೇಶ್ವರರಾವ್
ಬಲಕುಂದಿ ಗ್ರಾಮ ,ಸಿರುಗುಪ್ಪ ತಾಲೂಕ
(ವಕೀಲರು: ಶ್ರೀ ವೀರೇಶ ,ಸಿರುಗುಪ್ಪ )

**ಪ್ರತಿವಾದಿಗಳು**
ಗೊರವಯ್ಯ ತಂದೆ: ವೆಂಕಟೇಶ್ವರ ರಾವ್
ಬಲಕುಂದಿ ಗ್ರಾಮ, ಸಿರುಗುಪ್ಪ ತಾಲೂಕ
(ವಕೀಲರು: ಶ್ರೀ ಗಂಗಾರಾಮ್ ಸಿಂಗ್ ,ಸಿರುಗುಪ್ಪ)

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಬಲಕುಂದಿ ಗ್ರಾಮ | 414 G/1 | 2-00 | H-8/2015-16 | 28/2015-16 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಬಲಕುಂದಿ ಗ್ರಾಮದ** ಸ.ನಂ. **414 G/1** ವಿಸ್ತೀರ್ಣ **2-00 ಎಕರೆ** ಜಮೀನಿಗೆ ಸಂಭಂದಿಸಿದಂತೆ **ಪೋತಿ ವಾರಸತ್ವ ಪ್ರಕಾರ** ಸೀತಮ್ಮ **ಗಂಡ: ಲೇಟ್ ವೆಂಕಟೇಶ್ವರ ರಾವ್** ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಗೊರವಯ್ಯ ತಂದೆ: ಲೇಟ್ ವೆಂಕಟೇಶ್ವರ ರಾವ್** ಇವರು ದಿ: **13-8-2015** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನುದಿ: **18-12-2015, 8-1-2016, 29-1-2016, 11-3-2016, 28-3-2016, 22-4-2016, 29-4-2016 ಮತ್ತು 20-5-2016** ರಂದು **ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು

ವಾದಿಗಳಾದ ಶ್ರೀಮತಿ: ಸೀತಮ್ಮ ಗಂಡ: ಲೇಟ್ ವೆಂಕಟೇಶ್ವರರಾವ್‌ಬಲಕುಂದಿಗ್ರಾಮ, ಇವರು ಬಲಕುಂದಿ ಗ್ರಾಮದ ಸ.ನಂ. **414 G/1** ವಿಸ್ತೀರ್ಣ **2–00** ಎಕರೆ ಜಮೀನು ಪೋತಿ ಪಟ್ಟ ಪ್ರಕಾರ ನನ್ನ ಗಂಡನಾದ ವೆಂಕಟೇಶ್ವರ ರಾವ್ ಇವರು ದಿ:19–2–2015 ರಂದು ಮೃತಪಟ್ಟಿರುವುದರಿಂದ ನನ್ನ ಹೆಸರಿಗೆ ಜಮೀನು ವರ್ಗಾವಣೆಗಾಗಿ ಅರ್ಜಿ ಸಲ್ಲಿಸಿದ್ದು ನನ್ನ ಮಗನಾದ ಗೋರವಯ್ಯ ಇವರು ದಿ: 13–8–2015 ರಂದು ವಿನಾಕಾರಣ ನನಗೆ ಮಾನಸಿಕ ಕಿರುಕುಳ ನೀಡುವ ಏಕೈಕ ಉದ್ದೇಶದಿಂದ ನಿರಾಧಾರವಾದ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೃತ ನನ್ನ ಗಂಡನ ನಂತರದಲ್ಲಿ ಅವರ ಏಕೈಕ ಧರ್ಮಪತ್ನಿಯಾದ ನಾನೇ ನೇರವಾದ ಉತ್ತರ ವಾರಸುದಾರಳಿರುವುದಾಗಿ ನನ್ನ ಮಗನ ನಿರಾಧಾರವಾದ ಆಕ್ಷೇಪಣೆ ಅರ್ಜಿಯನ್ನು ತಳ್ಳಿಹಾಕಿ ನನ್ನ ಹೆಸರಿಗೆ ಪೋತಿ ವಾರಸತ್ವ ಪ್ರಕಾರ ಪಟ್ಟ ವರ್ಗಾವಣೆ ಮಾಡಲು ಪ್ರಮಾಣಪತ್ರವನ್ನು ದಿ:20–5–2016 ರಂದು ಸಲ್ಲಿಸಿರುತ್ತಾರೆ. ಹಾಗೂ ದಿ: 11–3–2016 ಮತ್ತು 08–01–2016 ರಂದು ಲಿಖಿತ ಹೇಳಿಕೆಯಲ್ಲಿ ನನ್ನ ಗಂಡನ ಸ್ವಂತ ಸಂಪಾದನೆ ಮಾಡಿದ ಆಸ್ತಿಯಾಗಿದ್ದು ಇವರ ಮರಣಾ ನಂತರ ಏಕೈಕ ಧರ್ಮಪತ್ನಿಯಾದ ಪ್ರಪ್ರಥಮ ಉತ್ತರವಾರಸುದಾರಳೂ ಆದ ನನ್ನ ಹೆಸರಿಗೆ ಪೋತಿಪಟ್ಟ ಮಾಡಲು ಕೋರುತ್ತಾ ಜೀವನ ಭದ್ರತೆಗಾಗಿ ಈ ಆಸ್ತಿಯ ಹೊರತಾಗಿ ಬೇರೆ ಯವುದೇ ಆಸ್ತಿ ಇರುವುದಿಲ್ಲ ಕಾರಣ ನನ್ನ ಮಗನ ಆಕ್ಷೇಪಣೆ ಅರ್ಜಿ ತಳ್ಳಿಹಾಕಿ ನನ್ನ ಹೆಸರಿಗೆ ಪೋತಿ ಪಟ್ಟ ಮಾಡಲು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

( ಶ್ರೀಮತಿ: ಸೀತಮ್ಮ ಪರವಾಗಿ ಶ್ರೀ ವೈ.ವೀರೇಶ, ವಕೀಲರು ದಿ:28–3–2016 ರಂದು ವಕಾಲತ್ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ವಕೀಲರು ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುವುದಿಲ್ಲ.)

**ಪ್ರತಿವಾದಿಗಳು**

ಪ್ರತಿವಾದಿಗಳಾದ ಶ್ರೀ ಗೋರವಯ್ಯ ತಂದೆ: ವೆಂಕಟೇಶ್ವರ ರಾವ್, ಬಲಕುಂದಿ ಗ್ರಾಮ ಇವರು ಬಲಕುಂದಿ ಗ್ರಾಮದ ಸ.ನಂ. **414 G/1 ವಿಸ್ತೀರ್ಣ 2–00 ಜಮೀನು** ಪೋತಿ ಪಟ್ಟ ಪ್ರಕಾರ ವರ್ಗಾವಣೆಗಾಗಿ ತಾಯಿಯಾದ ಸೀತಮ್ಮ ಇವರು ಅರ್ಜಿಸಲ್ಲಿಸಿದ್ದು ದಿ:13–8–2015 ರಂದು ಈ ಭೂಮಿಯಲ್ಲಿ ಪಾಲು ಇರುತ್ತದೆಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಸದ್ರಿ ವಿಚಾರಣೆಗೆ ದಿ: 18–12–2015 ಮತ್ತು 08–1–2016, 18–1–2016, 29–1–2016, 28–3–2016 ರಂದು ಹಾಜರಾಗಿರುತ್ತಾರೆ. ಯವುದೇ ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುವುದಿಲ್ಲ.

( ಶ್ರೀ ಗೋರವಯ್ಯ ಇವರ ಪರವಾಗಿ ಶ್ರೀ ಗಂಗಾರಾಮ್‌ಸಿಂಗ್ ಇವರು ದಿ:8–1–2016 ರಂದು ವಕಾಲತ್ ಅರ್ಜಿ ಸಲ್ಲಿಸಿ ಮುಂದಿನ ವಿಚಾರಣೆಗಳಿಗೆ ಹಾಜರಾಗಿರುವುದಿಲ್ಲ ಮತ್ತು ಯವುದೇ ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುವುದಿಲ್ಲ. )

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು **ಪೋತಿ ವಾರಸತ್ವ ಪ್ರಕಾರ** ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

# ಆದೇಶ

**ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಬಲಕುಂದಿಗ್ರಾಮದ ಸ.ನಂ.414 G/1 ವಿಸ್ತೀರ್ಣ 2–00 ಎಕರೆ ಜಮೀನು ಪೋತಿವಾರಸತ್ವ ಪ್ರಕಾರ ಸೀತಮ್ಮ ಗಂಡ: ವೆಂಕಟೇಶ್ವರ ರಾವ್ ಲೇಟ್ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.**

ಈ ಆದೇಶವನ್ನು ದಿನಾಂಕ: 27–05–2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ